# ದಾವಣಗೆರೆ ವಿಶ್ವವಿದ್ಯಾನಿಲಯ

## ಕಾಲೇಜು ಅಭಿವೃದ್ಧಿ ಪರಿಷತ್, ಶಿವಗಂಗೋತ್ರಿ ದಾವಣಗೆರೆ – 577 002.

☎: 08192-208309, E-mail: cdcdu2013@gmail.com

ಸಂಖ್ಯೆ: ಸಿ.ಸಂ.3315 ಡಿಯು667 ಸಿಡಿಸಿ2016/01/5764 ದಿನಾಂಕ: 10.01.2017

### ಸುತ್ತೋಲೆ

ವಿಷಯ : 2017–18ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಗಾಗಿ ತಂತ್ರಾಂಶದ ಮೂಲಕ ಪ್ರಸ್ತಾವನೆಗಳನ್ನು ಸಲ್ಲಿಸುವ ಬಗ್ಗೆ

ಉಲ್ಲೇಖ : 1. ಸಂ: ಸಿ.ಸಂ.3315 ಡಿಯು667 ಸಿಡಿಸಿ2016/896/4445, ದಿನಾಂಕ:29.09.2016
2. ಮಾನ್ಯ ಕುಲಪತಿಗಳವರ ಮೌಖಿಕ ಆದೇಶ ದಿನಾಂಕ:10.01.2017

ಉಲ್ಲೇಖಿತ (1) ರ ಪತ್ರದಲ್ಲಿ, ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ 2017–18ನೇ ಶೈಕ್ಷಣಿಕ ಸಾಲಿಗೆ ಸ್ನಾತಕ / ಸ್ನಾತಕೋತ್ತರ ಪದವಿಗಳಿಗೆ ಸಂಯೋಜನೆ ಅರ್ಜಿಗಳನ್ನು ಸಲ್ಲಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ರಾಷ್ಟ್ರೀಯ ಮಾಹಿತಿ ಸಂಸ್ಥೆ (ಎನ್.ಐ.ಸಿ)ಯವರು ಅಭಿವೃದ್ಧಿಪಡಿಸಿರುವ ಆನ್‌ಲೈನ್ ತಂತ್ರಾಂಶದಲ್ಲಿ ಅಳವಡಿಸಿರುವ ಏಕರೂಪ ನಮೂನೆಯಲ್ಲಿಯೇ 2017–18ನೇ ಸಾಲಿನಿಂದ ಸಂಯೋಜನೆಯ ಅರ್ಜಿಗಳನ್ನು ಆಯಾ ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳಿಂದ ಪಡೆಯಲು ತಿಳಿಸಿರುತ್ತಾರೆ.

ಆದುದರಿಂದ, ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು ತಮ್ಮ ಕಾಲೇಜಿನ 2017–18ನೇ ಸಾಲಿನ ಸಂಯೋಜನೆಯ ಪ್ರಸ್ತಾವನೆಗಳನ್ನು ಈಗಾಗಲೇ ಮ್ಯಾನ್ಯುಯಲ್‌ನಲ್ಲಿ ಸಲಿಸಿದ್ದರೂ ಸಹಾ, ಕಡ್ಡಾಯವಾಗಿ ಆನ್‌ಲೈನ್ ತಂತ್ರಾಂಶದಲ್ಲಿ ಅಳವಡಿಸಿರುವ ಏಕರೂಪ ನಮೂನೆಯಲ್ಲಿಯೇ ಸಂಯೋಜನೆಯ ಅರ್ಜಿಗಳನ್ನು ಸಲ್ಲಿಸಲು ತಿಳಿಸಲಾಗಿದೆ.

| ಕ್ರ.ಸಂ. | ವಿವರ | | ದಿನಾಂಕ |
|---|---|---|---|
| 01 | ಸಂಯೋಜನಾ ಅರ್ಜಿ ಪಡೆಯಲು, ಆನ್‌ಲೈನ್‌ನಲ್ಲಿ Request ಸಲ್ಲಿಸುವುದು | | 13.01.2017 ಸಂಜೆ 4.30ರವರೆಗೆ |
| 02 | ಕಾಲೇಜಿನ ಸಂಯೋಜನಾ ಅರ್ಜಿಯನ್ನು ಆನ್‌ಲೈನ್‌ನಲ್ಲಿ Upload ಮಾಡುವುದು | | 19.01.2017 ಸಂಜೆ 4.30ರವರೆಗೆ |
| 03 | ಕಾಲೇಜಿನ ಸಂಯೋಜನಾ ಅರ್ಜಿ ಮತ್ತು ಆಗತ್ಯ ಮಾಹಿತಿಗಳನ್ನು ಆನ್‌ಲೈನ್‌ನಲ್ಲಿ Upload ಮಾಡಿದ ವಿವರಗಳನ್ನು ಬೈಂಡಿಂಗ್ ಮಾಡಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು | | 21.01.2017 ಸಂಜೆ 4.30ರವರೆಗೆ |
| 4 | ಸಂಪರ್ಕಿಸುವ ವಿಳಾಸ: | ಶ್ರೀ ತಿಪ್ಪೇಸ್ವಾಮಿ, ಹೆಚ್. ಜಿ.<br>ಐ.ಸಿ.ಟಿ. ಸೆಲ್, ದಾವಣಗೆರೆ ವಿಶ್ವವಿದ್ಯಾನಿಲಯ<br>ದೂರವಾಣಿ ಸಂ. 08192 – 208027<br>ಮೊಬೈಲ್ ಸಂ.9880438495<br>ಇ–ಮೇಲ್ :ictdudvg@gmail.com | |
| 5 | ಸಂಯೋಜನೆಯ ಆನ್‌ಲೈನ್‌ನ ಲಾಗಿನ್ ವಿಳಾಸ | http://164.100.133.129:81/uniaffiliation | |

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಆನ್‌ಲೈನ್ ಮೂಲಕ ಸಂಯೋಜನಾ ಅರ್ಜಿ ಸಲ್ಲಿಸುವ ಬಗ್ಗೆ ಒಂದು ದಿನದ ಕಾರ್ಯಗಾರ ದಿನಾಂಕ:18.01.2017ರಂದು ಮಧ್ಯಾಹ್ನ 02.30ಕ್ಕೆ ವಿಶ್ವವಿದ್ಯಾನಿಲಯದ ಎಂ.ಬಿ.ಎ. ವಿಭಾಗದ ಆಡಿಟೋರಿಯಂನಲ್ಲಿ ಏರ್ಪಡಿಸಲಾಗಿದೆ. ಎಲ್ಲಾ ಪ್ರಾಂಶುಪಾಲರುಗಳು ತಮ್ಮ ಜೊತೆಯಲ್ಲಿ ಒಬ್ಬ ಕಂಪ್ಯೂಟರ್ ಪರಿಣಿತ ಹೊಂದಿದ ಸಿಬ್ಬಂದಿಯೊಂದಿಗೆ ಕಡ್ಡಾಯವಾಗಿ ಹಾಜರಾಗಲು ಸೂಚಿಸಲಾಗಿದೆ.

<u>ಸೂಚನೆ: ಕಾರ್ಯಗಾರಕ್ಕೆ ಹಾಜರಾಗುವ ಸಿಬ್ಬಂದಿಗಳಿಗೆ ಯಾವುದೇ ಭತ್ಯೆಗಳನ್ನು ಪಾವತಿ ಮಾಡಲಾಗುವುದಿಲ್ಲ</u>

ಆದೇಶದ ಮೇರೆಗೆ,

ನಿರ್ದೇಶಕರು

ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ದಾವಣಗೆರೆ ವಿಶ್ವವಿದ್ಯಾನಿಲಯ ... ದಾವಣಗೆರೆ-577 002.

ಗೆ,

ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,